**ದಿನಾಂಕಃ 20.12.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಡಿ ಎನ್ ಪಿ ವಕೀಲರಿಂದಃ-**

1 ನೇ ವಾದಿ ನನ್ನ ಹೆಂಡತಿ ಎಂದರೆ ಸರಿ. ಪ್ರತಿವಾದಿಗಳು ನನಗೆ ಗೊತ್ತು. ಪ್ರತಿವಾದಿಗಳು ಸೇರಿ ನಮ್ಮ ವಿರುದ್ದ ಓ ಎಸ್ ನಂ 268ಃ2012 ರಂತೆ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನೀವು ವಕೀಲರನ್ನು ನೇಮಿಸಿರುತ್ತೀರಿ ಎಂದರೆ ಸಾಕ್ಷಿಯ ಅದನ್ನು 1 ನೇ ವಾದಿ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಸದರಿ ದಾವೆಯಲ್ಲಿ ನಮ್ಮ ವಿರುದ್ದ ಪ್ರತಿವಾದಿಗಳ ಆಸ್ತಿಗೆ ತಂಟೆ ತಕರಾರು ಮಾಡಬಾರದು ಎಂದು ಆದೇಶವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶದ ವಿರುದ್ದ ಆರ್ ಎ ನಂ 68ಃ2015 ರಂತೆ ಮೇಲ್ಮನವಿ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಮೇಲ್ಮನವಿ ವಜಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆದೇಶದ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಆರ್ ಎಸ್ ಎ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ಸದರಿ ವಿಚಾರವನ್ನು ನನಗೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಓ ಎಸ್ ನಂ 268ಃ2012 ಮತ್ತು ಆರ್ ಎ ನಂ 68ಃ2015 ವಜಾ ಆಗಿರುವ ವಿಚಾರ ನನ್ನ ಹೆಂಡತಿ ನನಗೆ ತಿಳಿಸಿರುವುದಿಲ್ಲ. ನಾನು ಮತ್ತು ನನ್ನ ಹೆಂಡತಿ ಒಟ್ಟಿಗೆ ವಾಸವಾಗಿದ್ದು ದಾವೆಯನ್ನು ನನ್ನ ಹೆಂಡತಿಯೇ ನೋಡಿಕೊಳ್ಳುತ್ತಿದ್ದರು.

ದಾವಾ ಸ್ವತ್ತಿನ ಅಸಸ್ಮೆಂಟ್ ನಂಬರ್ ಎಷ್ಟು ಎಂದರೆ ಸಾಕ್ಷಿಯು ಸೈಟ್ ನಂ 20 ಎಂದು ನುಡಿಯುತ್ತಾರೆ. ಸೈಟ್ ನಂ 20 ಹೊರತುಪಡಿಸಿ ದಾವಾ ಆಸ್ತಿಯ ಅಸಸ್ಮೆಂಟ್ ನಂಬರ್ ನನಗೆ ಗೊತ್ತಿಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ನಾವು ಶಶಿಶೇಖರ್ ರವರಿಂದ ಖರೀದಿಸಿರುತ್ತೇವೆ. ಶಶಿಶೇಖರ್ ರವರಿಗೆ ಪುರಸಭೆಯವರು ಆಶ್ರಯ ಯೋಜನೆಯಡಿ ದಾವಾ ಆಸ್ತಿ ನೀಡಿರುತ್ತಾರೆ ಎಂದರೆ ಸರಿ. ದಾವಾ

ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಅನುಮತಿ ಪಡೆದಿರುವುದಿಲ್ಲ ಎಂದರೆ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಸುತ್ತಾ ಮುತ್ತಾ ಇರುವ ಆಸ್ತಿಗಳು ಪುರಸಭೆಯಿಂದ ಮಂಜೂರಾದ ಆಸ್ತಿಗಳು ಎಂದರೆ ಸರಿ. ಮೃತ 1 ನೇ ಪ್ರತಿವಾದಿಯವರಿಗೂ ಪುರಸಭೆಯವರು ಆಶ್ರಯ ಯೋಜನೆ ಅಡಿ ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ಸೈಟ್ ನಂಬರ್ ಎಷ್ಟು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಸೈಟ್ ನಂ 89 ಎಂದರೆ ನನಗೆ ಗೊತ್ತಿಲ್ಲ. ನಾನು ಶಶಿಶೇಖರ್ ರವರು ಮಾರಾಟ ಮಾಡಿದ ಆಸ್ತಿ ಇದೇ ಎಂದು ನಿಮಗೆ ಯಾರು ತೋರಿಸಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಶಶಿಶೇಖರ್ ರವರು ವಾಸವಾಗಿದ್ದ ಮನೆಯನ್ನು ಖರೀದಿಸಿರುತ್ತೇವೆ ಎಂದು ನುಡಿಯುತ್ತಾರೆ. ಶಶಿಶೇಖರ್ ರವರು ಪ್ರತಿವಾದಿಗಳು ಸ್ವಾದೀನದಲ್ಲಿದ್ದ ಖಾಲಿ ಜಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಸ್ವಾದೀನಕ್ಕೆ ನಾನು ಮತ್ತು ನನ್ನ ಹೆಂಡತಿ ತಂಟೆ ತಕರಾರು ಮಾಡಿದ ಕಾರಣ ಅವರು ನಮ್ಮ ವಿರುದ್ದ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಶಶಿಶೇಖರ್ ರವರಿಗೆ ಪ್ರತಿವಾದಿಯ ಆಸ್ತಿಯ ಸುತ್ತಾ ಮುತ್ತಾ ಯಾವುದೇ ಆಸ್ತಿ ಇಲ್ಲಾ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಪುರಸಭೆಯವರು ಯಾವತ್ತೂ ಅಳತೆ ಮಾಡಿಲ್ಲ ಎಂದರೆ ಸರಿ.

ದಾವಾ ಆಸ್ತಿಯ ಪೂರ್ವದಲ್ಲಿ ರಾಧಮ್ಮ ರವರ ಆಸ್ತಿ ಇಲ್ಲಾ ಎಂದರೆ ಸರಿಯಲ್ಲ. ಪ್ರತಿವಾದಿಗಳ ಮನೆಯ ಆಜುಬಾಜುವಿನಲ್ಲಿ ನಾನು ವಾಸವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಿಂದ 3 ರ ಆಸ್ತಿಗಳು ಪ್ರತಿವಾದಿಗಳ ಮನೆಯ ಚಕ್ಕುಬಂದಿಯಲ್ಲಿ ಇಲ್ಲಾ ಎಂದರೆ ಸರಿಯಲ್ಲ. ನಾನು ಸುಳ್ಳು ಮಾಹಿತಿಯನ್ನು ನೀಡಿ ಸುಳ್ಳು ಚಕ್ಕುಬಂಧಿಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-5 ರಿಂದ 7 ದಾವಾ ಆಸ್ತಿಗೆ ಸಂಬಂಧಿಸಿದ ದಾಖಲೆಗಳು ಎಂದರೆ ಸರಿ. ನಿಪಿ-7 ರಲ್ಲಿ ಪ್ರತಿವಾದಿಗಳ ಆಸ್ತಿ ವಿವರ ಇಲ್ಲಾ ಎಂದರೆ ಸರಿ. ಸಾಕ್ಷಿ ಸೈಟ್ ನಂ 20 ರ ಪಕ್ಕದಲ್ಲಿ ಸೈಟ್ ನಂ 89 ಬರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಆಸ್ತಿ ಬೇರೆ ನಮ್ಮ ಆಸ್ತಿ ಬೇರೆ ಎಂದರೆ ಸಾಕ್ಷಿಯು ನಮ್ಮ ಮನೆ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-15 ರಲ್ಲಿ ಅಸಸ್ಮೆಂಟ್ ನಂಬರ್ ಬರೆದಿರುವುದಿಲ್ಲ ಎಂದರೆ ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ ಆದರೆ ನಿಪಿ-15 ನಮ್ಮ ಮನೆಯ ವಿದ್ಯುತ್ ಸಂಪರ್ಕ್ಕೆ ನೀಡಿದ ಪ್ರಮಾಣಪತ್ರ ಎಂದು ನುಡಿಯುತ್ತಾರೆ. ನಿಪಿ-15 ರಲ್ಲಿ ದಾವಾ ಆಸ್ತಿಯ ವಿವರ ಬರೆದಿರುವುದಿಲ್ಲ ಎಂದರೆ ನಾನು ವಾಸವಾಗಿರುವ ಮನೆಗೆ ನೀಡಿರುವ ವಿದ್ಯುತ್ ಸಂಪರ್ಕದ ಪ್ರಮಾಣಪತ್ರ ಎಂದು ನುಡಿಯುತ್ತಾರೆ. ನಿಪಿ-15 ಸೈಟ್ ನಂ 20 ಕ್ಕೆ ಸಂಬಂಧಪಟ್ಟಿದ್ದಲ್ಲ ಎಂದರೆ ಸರಿಯಲ್ಲ.

**( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದು ಮುಂದೂಡಲಾಯಿತು )**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.